ದಿನಾಂಕಃ **29.09.2022** ರಂದು ಸಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ** ಶ್ರೀ ಪಿ ಎಸ್ ಕೆ ಎದುರುದಾರರ ಪರ ವಕೀಲರಿಂದಃ

13. ಕೆಲವೊಂದು ಕಟ್ಟಡಗಳು ದಾವಾಸ್ತಿಯ ಒಳಗಡೆಯಿರುವುದಿಲ್ಲ ಎನ್ನುವ ವಿಚಾರವನ್ನು ನನ್ನ ವರದಿಯಲ್ಲಿ ಕಾಣಿಸಿಲ್ಲ ಎಂದರೆ ಸರಿ. ದಾವಾಸ್ತಿಗೆ ಹೊಂದಿಕೊಂಡಂತೆ ಸರಕಾರಿ ಜಾಗ ಇರುವ ಬಗ್ಗೆ ನೀವು ನೋಟ್ ಮಾಡಿಕೊಂಡಿದ್ದೀರೋ ಎಂಬ ಪ್ರಶ್ನೆಗೆ ಸಾಕ್ಷಿ ಅವಶ್ಯಕತೆ ಇದ್ದದ್ದನ್ನು ನನ್ನ ಪುಸ್ತಕದಲ್ಲಿ ನೋಟ ಮಾಡಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ದಾವಾಸ್ತಿಯ ಪಕ್ಕದಲ್ಲಿರುವ ಜಾಗದಲ್ಲಿರುವ ಕಟ್ಟಡದ ಬಗ್ಗೆ ನಿಮ್ಮ ವರದಿಯಲ್ಲಿ ಕಾಣಿಸಿದ್ದೀರೋ ಎಂಬ ಪ್ರಶ್ನೆಗೆ ಸಾಕ್ಷಿ ಕೇವಲ ದಾವಾಸ್ತಿಯಲ್ಲಿದ್ದ ಕಟ್ಟಡದ ಬಗ್ಗೆ ಮಾತ್ರ ನನ್ನ ವರದಿಯಲ್ಲಿ ಕಾಣಿಸಿದ್ದು , ದಾವಾಸ್ತಿಯ ಪಕ್ಕದ ಜಾಗದಲ್ಲಿದ್ದ ಕಟ್ಟಡದ ಬಗ್ಗೆ ನನ್ನ ವರದಿಯಲ್ಲಿ ಕಾಣಿಸಿಲ್ಲ ಎಂದು ನುಡಿಯುತ್ತಾರೆ. ನಾನು ಟಿಪ್ಪಣಿ ಮಾಡಿಕೊಂಡಿರುವ ಪುಸ್ತಕ ಈಗ ನನ್ನ ಬಳಿ ಇಲ್ಲ ಕಾರಣ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿದ ನಂತರ ಅದನ್ನು ಇಟ್ಟುಕೊಂಡಿಲ್ಲ. ನಾನು ಆ ರೀತಿ ಟಿಪ್ಪಣಿ ಬರೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ದಾವಾಸ್ತಿಗೆ ಹೊಂದಿಕೊಂಡಂತೆ ಇರುವ ಸರಕಾರಿ ಜಮೀನನ್ನು ಕಾಣಿಸಿಲ್ಲ. ಸಾಕ್ಷಿ ಅದರ

ಅವಶ್ಯಕತೆ ಇಲ್ಲದೇ ಇದ್ದ ಕಾರಣ ಅದನ್ನು ನಕ್ಷೆಯಲ್ಲಿ ಕಾಣಿಸಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಗೆ ಭೇಟಿ ನೀಡಿದಾಗ ಮತ್ತು ಶ್ರೀನಿವಾಸ ದೇವಸ್ಥಾನವನ್ನು ನೋಡಿದಾಗ ನಿಆರ್ - 11 ಟ್ರಸ್ಟ ಡೀಡ್ ನನ್ನ ಗಮನಕ್ಕೆ ಬಂದಿದೆ ಎಂದರೆ ಸರಿಯಲ್ಲ. ದಾವಾಸ್ತಿಗೆ ಭೇಟಿ ನೀಡಿದಾಗ ದೇವಸ್ಥಾನದ ಹೊರಗಿನ ಪ್ರಾಂಗಣದಲ್ಲಿರುವ ಕಟ್ಟಡದಲ್ಲಿ ಎದುರುದಾರರು ತನ್ನ ಸಂಸಾರ ಸಮೇತ ವಾಸವಾಗಿರುವ ವಿಚಾರ ನನಗೆ ಗಮನಕ್ಕೆ ಬಂದಿದೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಗೆ ಭೇಟಿ ನೀಡಿದಾಗ ಎದುರುದಾರರು ಬಂದು ನನಗೆ ನಮಸ್ಕರಿಸಿ ಪರಿಚಯ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಅವರು ಬೇರೆ ಕಡೆಯಿಂದ ಕಾರಿನಲ್ಲಿ ದಾವಾಸ್ತಿಗೆ ಬಂದಿದ್ದರು ಎಂದು ನುಡಿಯುತ್ತಾರೆ. ಎದುರುದಾರರು ಕಮಿಷನ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಹಾಜರಿದ್ದರು. ಎದುರುದಾರರು ಸ್ಥಳದಲ್ಲಿ ಹಾಜರಿದ್ದರೂ ಕೂಡಾ ಕಮೀಷನ್ ಪ್ರಕ್ರಿಯೆಗೆ ಸಹಕರಿಸಿಲ್ಲ ಎಂದು ಸುಳ್ಳಾಗಿ ನನ್ನ ವರದಿಯಲ್ಲಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯ ಸಮೀಕ್ಷೆ ಮತ್ತು ದೇವಸ್ಥಾನದ ಸಮೀಕ್ಷೆ ನಡೆಸುವ ಸಮಯದಲ್ಲಿ ಎದುರುದಾರರು ಸದರಿ ದೇವಸ್ಥಾನದ ಪ್ರಾಂಗಣದಲ್ಲಿ ವಾಸವಾಗಿದ್ದರು ಮತ್ತು ದೇವಸ್ಥಾನದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು ಮತ್ತು ಪೂಜೆ ಮಾಡುತ್ತಿದ್ದರು ಎನ್ನುವ ವಿಚಾರ ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ದೇವಸ್ಥಾನ ಮತ್ತು ಪ್ರಾಂಗಣದ ಕಟ್ಟಡಗಳನ್ನು ಮುಚ್ಚಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಎದುರುದಾರರು

ಮೌಖಿಕವಾಗಿ ನನ್ನ ಗಮನಕ್ಕೆ ತಂದಿದ್ದಾರೆ ಎಂದರೆ ಸರಿಯಲ್ಲ. ಅಂತಿಮ ಡಿಕ್ರಿಯ ಅರ್ಜಿ ಮತ್ತು ಅರ್ಜಿದಾರರು ಅದರೊಂದಿಗೆ ಲಗ್ತೀಕರಿಸಿರುವ ಶಪಥ ಪತ್ರ ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಶಪಥ ಪತ್ರದಲ್ಲಿ ಅರ್ಜಿದಾರರು ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಟ್ರಸ್ಟ ಡೀಡ್ ಮಾಡಲು ನಿರ್ಧರಿಸಿದ್ದೇವೆ ಎಂದು ಹೇಳಿರುವ ವಿಚಾರ ನನ್ನ ಗಮನಕ್ಕೆ ಬಂದಿದೆ ಎಂದರೆ ಸರಿಯಲ್ಲ. ಸದರಿ ವಿಚಾರ ನನ್ನ ಗಮನಕ್ಕೆ ಬಂದ ನಂತರ ದೇವಸ್ಥಾನ ಇರುವ ಜಾಗ ಮತ್ತು ಸದರಿ ಕಟ್ಟಡ ಇರುವಂತಹ ಜಾಗವನ್ನು ನನ್ನ ವರದಿಯ ಎ ಶೆಡ್ಯೂಲ್ ನಲ್ಲಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ನಿಆರ್ - 11 ಕ್ಕೆ ಪೂರಕವಾಗಿ ಮತ್ತು ಅರ್ಜಿದಾರರು ಹೇಳುವ ಟ್ರಸ್ಟಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ದೇವಸ್ಥಾನವನ್ನು ಎ ಶೆಡ್ಯೂಲ್ ನಲ್ಲಿ ವಿಂಗಡಿಸಿದ್ದೇನೆ ಎಂದರೆ ಸರಿಯಲ್ಲ.

14. ನಾನು ಎದುರುದಾರರಿಗೆ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು , ಸದರಿ ನೋಂದಾಯಿತ ಅಂಚೆ ಯಲ್ಲಿ ಕಾಣಿಸಿರುವಂತಹ ವಿಳಾಸದಲ್ಲಿ ಎದುರುದಾರರು ವಾಸವಾಗಿಲ್ಲ ಬದಲಿಸಿಗೆ ದೇವಸ್ದಾನದಲ್ಲಿ ವಾಸವಾಗಿದ್ದಾರೆ ಎಂದು ಕಂಡು ಬಂದಿದೆ ಎಂದರೆ ಸಾಕ್ಷಿ ನಾನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ವಿಳಾಸಕ್ಕೆ ಜಾರಿಯಾಗಿದೆ ಎಂದು ನುಡಿಯುತ್ತಾರೆ.

ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಎದುರುದಾರರ ಸುಳ್ಳು ವಿಳಾಸವನ್ನು ಕಾಣಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

15. ದಾವಾಸ್ತಿಗೆ ಮತ್ತು ದೇವಸ್ಥಾನಕ್ಕೆ ಭೇಟಿ ನೀಡಿದಾಗ ಕೆಲವೊಂದು ಚರಾಸ್ತಿಗಳು ಕಂಡು ಬಂದಿದೆ ಎಂದರೆ ಸಾಕ್ಷಿ ರಥ ಮತ್ತು ಹೋಮ ಕುಂಡಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಬಿಟ್ಟು ಬೇರೆ ಯಾವುದೇ ಚರಾಸ್ತಿಗಳು ಕಂಡು ಬಂದಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾಸ್ತಿಯಲ್ಲಿ ಮತ್ತು ದೇವಸ್ಥಾನದಲ್ಲಿ ಕಂಡು ಬಂದ ಮೇಲೆ ಹೇಳಿದ ಚರಾಸ್ತಿಗಳ ಬಗ್ಗೆ ನನ್ನ ವರದಿಯಲ್ಲಿ ಕಾಣಿಸಿಲ್ಲ ಮತ್ತು ಅದರ ಮೌಲ್ಯಮಾಪನ ಮಾಡಿಲ್ಲ. ನನ್ನ ವರದಿಯ ಎ ಅನುಸೂಚಿಯಲ್ಲಿ ಕಾಣಿಸಿರುವಂತಹ ಸ್ಥಿರಾಸ್ತಿ ಮತ್ತು ಅದರಲ್ಲಿರುವಂತಹ ದೇವಸ್ಥಾನ, ಕಟ್ಟಡ ಮತ್ತ ಚರಾ ಸ್ವತ್ತುಗಳ ಮೌಲ್ಯಮಾಪನ ವಿಂಗಡಿಸಿದಲ್ಲಿ ಅರ್ಜಿದಾರರ ಮತ್ತು ಎದುರದಾರರ ಪಾಲಿನಲ್ಲಿ ವ್ಯತ್ಯಾಸ ಕಂಡು ಬರುವ ಸಾಧ್ಯತೆ ಇದೆ ಎಂಬ ಪ್ರಶ್ನೆಗೆ ಅರ್ಜಿದಾರರ ಪರ ವಕೀಲರು ಸದರಿ ಪ್ರಶ್ನೆಯನ್ನು ಕೇಳಲು ಬರುವುದಿಲ್ಲ , ಡಿಕ್ರಿಯಲ್ಲಿ ಕೇವಲ ಸ್ಥಿರಾಸ್ತಿಯ ವಿಂಗಡಣೆ ಕುರಿತಂತೆ ಆದೇಶವಾಗಿದ್ದು , ಚರಾಸ್ತಿಯ ಬಗ್ಗೆ ಯಾವುದೇ ಆದೇಶವಾಗಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ಮೇಲೆ ಹೇಳಿದ ಪ್ರಶ್ನೆಯನ್ನು ಪುನಃ ಕೇಳಲಾಗಿ ಹಿಸ್ಸೆಯಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ , ಕಾರಣ 1 ಶೆಡ್ಯೂಲ್ ನಲ್ಲಿ ಕಾಣಿಸಿರುವ ಆಸ್ತಿಯನ್ನು ವಿಂಗಡಣೆ ಮಾಡದೇ ಅದನ್ನು ಪ್ರತ್ಯೇಕವಾಗಿ 1 ಶಡ್ಯೂಲ್ ನಲ್ಲಿ ಕಾಣಿಸಿದ್ದೇನೆ

ಎಂದು ನುಡಿಯುತ್ತಾರೆ. ಡಿಕ್ರಿಯಲ್ಲಿ ಕಾಣಿಸಿರುವ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ತಿಳಿದಿದೆ. ಡಿಕ್ರಿಯಲ್ಲಿ ಕಾಣಿಸಿದ ರೀತಿ ಅರ್ಜಿದಾರರ ಪಾಲು ಎಷ್ಟು ಮತ್ತು ಎದುರುದಾರರ ಪಾಲು ಎಷ್ಟು ಎಂದು ನಾನು ಲೆಕ್ಕಾಚಾರ ಮಾಡಿ ಕಾಣಿಸಿದ್ದೇನೆ. ನನ್ನ ವರದಿಯಲ್ಲಿ ಕಾಣಿಸಿರುವ 2 ನೇ ಶೆಡ್ಯೂಲ್ ನ ಎ ಅನುಸೂಚಿ ಮತ್ತು ಬಿ ಅನುಸೂಚಿಯಲ್ಲಿ ಕಾಣಿಸಿರುವಂತಹ ಲೆಕ್ಕಾಚಾರಕ್ಕೂ ಪ್ರಿಲಿಮಿನಿಯರಿಯಲ್ಲಿ ಕಾಣಿಸಿರುವಂತಹ ಲೆಕ್ಕಾಚಾರಕ್ಕೂ ವ್ಯತ್ಯಾಸ ಕಂಡು ಬರುತ್ತದೆ ಎಂದರೆ ಸರಿಯಲ್ಲ. 2 ನೇ ಶಡ್ಯೂಲ್ ನ ಎ ಮತ್ತು ಬಿ ಅನುಸೂಚಿಯಲ್ಲಿ 1 ನೇ ಶೆಡ್ಯೂಲ್ ನಲ್ಲಿ ಕಾಣಿಸಿರುವ ಆಸ್ತಿಯನ್ನು ಹೊರತುಪಡಿಸಿ ಕಾಣಿಸಿರುತ್ತೇನೆ.

16. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವಂತಹ ಎಲ್ಲಾ ವರದಿಗಳನ್ನು ನ್ಯಾಯಾಲಯವು ಅಂಗೀಕರಿಸಿರುತ್ತದೆ ಎಂದು ಹೇಳಿದ್ದು , ಆ ಬಗ್ಗೆ ನಾನು ನ್ಯಾಯಾಲಯದಿಂದ ಯಾವುದೇ ದೃಢೀಕರಣ ಪತ್ರವನ್ನು ಪಡೆದುಕೊಂಡಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯ ಮೇರೆಗೆ ಅರ್ಜಿದಾರರು ಮತ್ತು ಎದುರುದಾರರು ತಮ್ಮ ಆಕ್ಷೇಪಣಾ ಪತ್ರಗಳನ್ನು ಸಲ್ಲಿಸಿರಬಹುದು. ನಾನು ಈ ಹಿಂದೆ ನ್ಯಾಯಾಲಯಕ್ಕೆ ಸಲ್ಲಿಸಿರುವಂತಹ ಕಮೀಷನ್ ವರದಿಯ ಮೇರೆಗೆ ಸಲ್ಲಿಸಿರುವಂತಹ ಆಕ್ಷೇಪಣಾ ಪತ್ರದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ನಾನು ತಯಾರಿಸಿದ್ದೇನೆ ಎಂದು ಹೇಳಿ ಆಕ್ಷೇಪ ಎತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ. ನನ್ನ ಮುಖ್ಯ

ವಿಚಾರಣೆಯಲ್ಲಿ ನನ್ನ ಎಲ್ಲಾ ವರದಿಯನ್ನು ನ್ಯಾಯಾಲಯವು ಅಂಗೀಕರಿಸಿರುತ್ತದೆ ಎಂದು ಹೇಳಿರುವುದು ನಾನು ಅರ್ಜಿದಾರರಿಗೆ ಸಹಾಯ ಮಾಡುವ ಸಲುವಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅರ್ಜಿದಾರರ ಕಡೆಯಿಂದ ಆ ಪ್ರಶ್ನೆಯನ್ನು ಕೇಳಿರುವ ಕಾರಣ ನಾನು ಉತ್ತರಿಸಿದ್ದೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಆಯುಕ್ತರಾಗಿ ನೇಮಕಗೊಂಡ ನಂತರ ನಾವು ತಟಸ್ಥ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದರೆ ಸರಿ. ನ್ಯಾಯಾಲಯದ ಆಯುಕ್ತರು ದಾವೆಗೆ , ದಾವಾಸ್ತಿಗೆ ಮತ್ತು ದಾವೆಯ ಪಕ್ಷಗಾರರಿಗೆ ಯಾವುದೇ ರೀತಿಯ ಸಂಬಂದಪಟ್ಟಿರದ ವ್ಯಕ್ತಿಗಳಾಗಿರಬೇಕು ಎಂದರೆ ಸರಿ. ನಾನು ಸಲ್ಲಿಸಿದಂತಹ ವರದಿ ಮತ್ತು ನಕ್ಷೆ ಸಮರ್ಪಕವಾಗಿಲ್ಲ ಮತ್ತು ಅದರಿಂದ ಎದುರುದಾರರಿಗೆ ತೊಂದರೆಯಾಗಿದೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಸಲ್ಲಿಸಿರುವಂತಹ ವರದಿ ಅಂಗೀಕರಿಸತಕ್ಕದ್ದಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.